<u>**ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 13.06.2022.**</u>
<u>ಮುಂದುವರೆದ ಪಾಟೀ ಸವಾಲುಃ **9**(ಎ) ರಿಂದ **9**(ಸಿ) ಹಾಗೂ **24** ರಿಂದ **26** ನೇ ಪ್ರತಿವಾದಿ ಪರ ಶ್ರೀ.ಎಸಎನಎಲ ವಕೀಲರಿಂದಃ</u>

6. ಪ್ರತಿವಾದಿ 4 ರಿಂದ 20 ರವರು ವ್ಯವಹಾರದಲ್ಲಿ ಲೋಪ ಎಸಗಿದ್ದಾರೆ ಎಂದು ನೀವು ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿಯು ಹೌದು ತಿಳಿಸಿದ್ದೇನೆ ಎಂದು ಹೇಳುತ್ತಾರೆ. ಡಿಡಿಎಲಆರ ಪ್ರತಿವಾದಿ 20 ರವರ ಏನು ತಪ್ಪು ವ್ಯವಹಾರ ಮಾಡಿದ್ದಾರೆ ಎಂದರೆ ಸಾಕ್ಷಿಯು ಅವರು ಮೊಜನಿ ಕಾರ್ಯ ಮಾಡಿಲ್ಲ ಹಾಗೂ ನೋಟಿಸನ್ನು ಸಹ ಕಳುಹಿಸಿಲ್ಲ ಎಂದು ಹೇಳುತ್ತಾರೆ.ನನಗೆ 2010-11 ರಲ್ಲಿ ಉತಾರ ಪಡೆದಾಗ ತಪ್ಪು ವ್ಯವಹಾರದ ಮಾಹಿತಿ ನನಗೆ ತಿಳಿದಿದೆ. ತಪ್ಪು ವ್ಯವಹಾರದ ಕುರಿತು ಎಲ್ಲದಾರೂ ಅಪೀಲು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಈ ದಾವೆ ಮಾಡಿದ್ದೇನೆ ಎಂದು ಹೇಳುತ್ತಾರೆ. ಈ ದಾವೆಯಲ್ಲಿ ನೀವು ರೇವೆನ್ಯೂ ದಾಖಲೆಗಳು ತಪ್ಪಾಗಿವೆ ಅದನ್ನು ದುರಸ್ತಿ ಮಾಡಿಕೊಡಿ ಎಂದು ಪ್ರಾರ್ಥಿಸಿದ್ದೀರಾ ಎಂದರೆ ಸಾಕ್ಷಿಯು ನಮ್ಮ ಹಿಸ್ಸೆಗಳು ನಮಗೆ ಸಿಗಬೇಕು ಎಂದು ನುಡಿಯುತ್ತಾರೆ. ಹಿಸ್ಸೆಗಳ ಪ್ರಕಾರ ಮ್ಯುಟೇಶನ ಆಗಿರುವುದನ್ನು ನೀವು ಮಾನ್ಯ ಎಸಿ ರವರ ಬಳಿ ಪ್ರಶ್ನಿಸಿದ್ದೀರಾ ಎಂದರೆ ಸಾಕ್ಷಿಯು ಈ ದಾವೆ ಸಲ್ಲಿಸಿದ್ದೇನೆ ಎಸಿ ರವರ ಬಳಿ ಅಪೀಲು ಸಲ್ಲಿಸುವ ಪ್ರಮೇಯ ಇಲ್ಲ ಎಂದು ಹೇಳುತ್ತಾರೆ. ಮ್ಯುಟೇಶನಗಳು ಆಗಿದ್ದು ಅದನ್ನು ರೆವೆನ್ಯೂ ನಾಯಾಲಯದಲ್ಲಿ ಪ್ರಶ್ನಿಸದೆ ನೇರವಾಗಿ ಈ ದಾವೆಯಲ್ಲಿ ಆದೇಶವನ್ನು ಪಡೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ಪೋಡಿ ವ್ಯವಹಾರ ಯಾವ ಆಧಾರದ ಮೇರೆಗೆ ಆಗಿದೆ ಎಂದರೆ ಸಾಕ್ಷಿಯು ಕೇಲವರು ಖರೀದಿ ಪತ್ರದ ಆಧಾರದ ಮೇರೆಗೆ, ಕೇಲವರು ವರದಿ ಆಧಾರದ ಮೇರೆಗೆ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಸಾಕ್ಷಿಯು ಮುಂದುವರೆದು ನನ್ನ ಸಹೋದರನಿಗೆ ವಂಚನೆ ಮಾಡಿ ಮಾಡಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಸರ್ವೆ ನಂ. 121/4 ರ ಚಕಂಬದಿ ಕೇಳಲಾಗಿ ಸಾಕ್ಷಿಯು ಆರ ಎಸ ನಂ. 121/2 ಎ ರ ಭಾಗ ಸರ್ವೆ ನಂ. 121/4 ಆಗಿದೆ ಎಂದು ಹೇಳುತ್ತಾರೆ. ಸರ್ವೆ ನಂ. 121/7 ರ ಚೆಕಬಂದಿ ಕೇಳಲಾಗಿ ಸಾಕ್ಷಿಯು ಸರ್ವೆ ನಂ. 121/2 ಎ ರ ಭಾಗ ಎಂದು ನಿಖರವಾಗಿ ಚೆಕಬಂದಿ

ಹೇಳಲು ಬರುವುದಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂ. 121/7 ರ ಪೂರ್ವಕ್ಕೆ ಹಾಗೂ ಪಶ್ಚಿಮಕ್ಕೆ ಯಾರ ಆಸ್ತಿ ಇದೆ ಎಂದರೆ ಸಾಕ್ಷಿಯು ನಿಖರವಾಗಿ ಹೇಳಲು ಬರುವುದಿಲ್ಲ ಎಂದು ಹೇಳುತ್ತಾರೆ. ಪ್ರಕಾಶ ಜೋರಾಪೂರೆ ರವರು ಖರೀದಿಸಿದ ಆಸ್ತಿ ಸರ್ವೆ ನಂ. 121/5 ಇರುತ್ತದೆ. ಪ್ರಕಾಶ ಜೋರಾಪೂರೆ ಆಸ್ತಿಯ ಪಕ್ಕದಲ್ಲಿ ದೇವಪ್ಪಾ ಗುರವ ರವರ ಜಮೀನು ಇದೆ ಎಂದರೆ ನಿಜ. ಸಾಕ್ಷಿಯು ವಂಚನೆ ಮಾಡಿ ಖರಿದಿಸಿದ ಆಸ್ತಿ ಇದೆ ಎಂದು ಹೇಳುತ್ತಾರೆ. ಸರ್ವೆ ನಂ. 121/8 ಪೂರ್ವಕ್ಕೆ ಕಾರ್ಖಾನೆ ಇದೆ. ಪಶ್ಚಿಮಕ್ಕೆ ಏನು ಇದೆ ಎಂದರೆ ಸಾಕ್ಷಿಯು ಪುನಃ ಪೂರ್ವಕ್ಕೆ ಪುನೇರಿ ಮೋಟರ ರವರ ಜಮೀನು ಇದೆ ಪಶ್ಚಿಮಕ್ಕೆ ಕಾರ್ಖಾನೆ ಇತ್ತು ಈಗ ಅದು ಬಿದ್ದಿದೆ. ಸರ್ವೆ ನಂ. 121/8 ರಿಂದ 121/5 ಎಷ್ಟು ಅಂತರದಲ್ಲಿ ಇದೆ ಎಂದರೆ ಸಾಕ್ಷಿಯು ಅವೆರಡು ಜಮೀನುಗಳು ಒಂದೇ ಜಮೀನಿನಲ್ಲಿ ಭಾಗ ಮಾಡಿ ತೆಗೆದುಕೊಂಡಿದ್ದಾರೆ ಎಂದು ಹೇಳುತ್ತಾರೆ. ಸರ್ವೆ ನಂ. 121/2 ಬಿ ರ ಹೊಸ ನಂಬರ ಏನಾದರು ಇದೆಯಾ ಎಂದರೆ ಸಾಕ್ಷಿಯು ಸರ್ವೆ ನಂ. 121/2 ಇದೆ ಎಂದು ಹೇಳುತ್ತಾರೆ. ಸರ್ವೆ ನಂ. 121/2 ರಿಂದ 121/8 ಎಷ್ಟು ಅಂತರದಲ್ಲಿ ಇದೆ ಎಂದರೆ ಸಾಕ್ಷಿಯು ಒಂದೇ ಜಮೀನಿನಲ್ಲಿ ಭಾಗ ಮಾಡಲಾಗಿದೆ ಎಂದು ಹೇಳುತ್ತಾರೆ. ಸರ್ವೆ ನಂ. 121/8 ರಲ್ಲಿ ಸೈಫುದ್ದೀನ ರವರು ಸುಮಾರು 10-12 ವರ್ಷಗಳಿಂದ ಸ್ವಾಧೀನಲ್ಲಿ ಇರಬಹುದು ಆದರೆ ನಿಖರವಾಗಿ ಹೇಳಲು ಬರುವುದಿಲ್ಲ. ಸೈಫದ್ದೀನ ರವರ ಖರೀದಿ ಪತ್ರವನ್ನು ಎಲ್ಲಾದರೂ ಪ್ರಶ್ನಿಸಿ ತಕರಾರು ಮಾಡಿದ್ದೀರಾ ಎಂದರೆ ಸಾಕ್ಷಿಯು ಈ ದಾವೆ ಸಲ್ಲಿಸಿದ್ದೇನೆ ಎಂದು ಹೇಳುತ್ತಾರೆ.

7. ಸೈಫುದ್ದೀನ ರವರು ಆಸ್ತಿಯನು ಎಷ್ಟು ಹಣಕ್ಕೆ ಖರೀದಿಸಿದ್ದಾರೆ ನನಗೆ ಗೋತ್ತಿಲ್ಲ. ಸರ್ವೆ ನಂ. 121/6 ರ ಚೆಕಬಂದಿ ಕೇಳಲಾಗಿ ಸಾಕ್ಷಿಯು ಸರ್ವೆ ನಂ. 121/2 ರಲ್ಲಿ 9 ಎಕರೆ 27 ಗುಂಟೆ ಇದ್ದು ಅದರಲ್ಲಿ ಭಾಗ ಇದೆ ಎಂದು ನುಡಿಯುತ್ತಾರೆ. ನನ್ನ ಜವಾಬಿನಲ್ಲಿ ಸರ್ವೆ ನಂ. 121/2 ರಲ್ಲಿ 121/6 ಮತ್ತು 121/7 ಭಾಗಗಳು ಆಗಿವೆ ಎಂದು ಹೇಳಿದ್ದೇನೆ. ಸರ್ವೆ ನಂ. 121/6 ವಿ.15 ಗುಂಟೆ ಹಾಗೂ 121/7 ವಿ.2 ಗುಂಟೆ ಇದೆ. ಸರ್ವೆ ನಂ. 121/6 ವಿ. 15 ಗುಂಟೆ ಜಮೀನಿನಲ್ಲಿ ಬಾವಿ ಇದೆ. ಸರ್ವೆ ನಂ.

121/6 ರ ಪೂರ್ವಕ್ಕೆ ಯಾರ ಸರ್ವೆ ನಂಬರ ಜಮೀನು ಇದೆ ನನಗೆ ಗೋತ್ತಿಲ್ಲ. ಸರ್ವೆ ನಂ. 121/6 ರ ಪೂರ್ವಕ್ಕೆ ಇಟಂಗಿ ನಿರ್ಮಾಣ ಮಾಡುವ ವ್ಯವಹಾರ ಯಾರಾದರೂ ಮಾಡುತ್ತಾರೆಯೇ ಎಂದರೆ ಸಾಕ್ಷಿಯು ಮೊದಲು ಮಾಡುತ್ತಿದ್ದರು ಎಂದು ಹೇಳುತ್ತಾರೆ. ಅಸಲು ದಾವೆ ನಂ. 119/13 ರಲ್ಲಿ ದೇವಪ್ಪಾ ಗುರವ ರವರು ಸಲ್ಲಿಸಿದ ದಾವೆಯಲ್ಲಿ ನಾನು ನನ್ನ ಸಹೋದರನಿಗೆ ಜವಾಬು ಸಲ್ಲಿಸಲು ಅಧಿಕಾರ ಕೊಟ್ಟಿರಲಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮುಂದುಡಲಾಯಿತು.

( **ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು**.)

ಓ.ಹೇ.ಕೇ. ಸರಿ ಅದೆ.

**ಹಿರಿಯ ದಿವಾಣಿ ಮತ್ತು ಜೆಎಂಎಫ ಸಿ ನ್ಯಾಯಾಧೀಶರು**
**ಖಾನಾಪೂರ .**